1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 12

CW- 07

ಪ್ರ. ಬೋ. ದಿನಾಂಕಃ 24-06-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಆಜನಪ್ಪ |
| ತಂದೆ/ಗಂಡನ ಹೆಸರು | : | ಚಂದ್ರಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕಂದಗಲ್ಲ , ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ಅಜ್ಜ. ಚಾಸಾ-4 ನನ್ನ ತಂಗಿ, ಚಾಸಾ-8 ನನ್ನ ತಾಯಿ, ಚಾಸಾ-9 ನನ್ನ ಸ್ನೇಹಿತ, 1 ಮತ್ತು 2 ನೇ ಆರೋಪಿತರು ನನ್ನ ಚಿಕ್ಕಪ್ಪಂದಿರು, 3 ನೇ ಆರೋಪಿ ನನ್ನ ಚಿಕ್ಕಮ್ಮ , 4 ನೇ ಆರೋಪಿ ನನ್ನ ಅತ್ತೆ. ಮೃತೆ ಗೌರಮ್ಮ ನನ್ನ ಚಿಕ್ಕಮ್ಮ.

ದಿ.20-06-2021 ರಂದು ನಾನು ಊರಲ್ಲಿ ಇದ್ದಾಗ ಚಾಸಾ-9 ಪ್ರಕಾಶ್ ರವರು ನನ್ನ ಚಿಕ್ಕಮ್ಮ ಮೃತಪಟ್ಟಿರುತ್ತಾರೆ ಎಂದು ನನಗೆ ತಿಳಿಸಿದ. ನಂತರ ನಾನು ಈ ವಿಷಯವನ್ನು ಚಾಸಾ-1 ಮತ್ತು ನನ್ನ ತಾಯಿಗೆ ತಿಳಿಸಿದೆ. ನಂತರ ನಾವೆಲ್ಲರೂ ಸೇರಿಕೊಂಡು ಆರೋಪಿತರ ಊರಿಗೆ ಹೋದೆವು. ಆಗ ಮೃತ ನನ್ನ ಚಿಕ್ಕಮ್ಮ ಶವವನ್ನು ಮಂಚದ ಮೇಲೆ ಹಾಕಿದ್ದರು.

ನನ್ನ ಚಿಕ್ಕಮ್ಮಳಿಗೆ 1 ನೇ ಆರೋಪಿ ಮತ್ತು ಮನೆಯವರು ಮಾನಸಿಕವಾಗಿಮತ್ತು ದೈಹಿಕವಾಗಿ ನೀನು ಇದ್ದು ಏನು ಮಾಡಬೇಕಿದೆ, ಸಾಯಿ, ನೇಣುಹಾಕಿಕೋ, ವಿಷ ಸೇವಿಸು ಎಂದು ಕಿರುಕುಳ ನೀಡುತ್ತಿದ್ದರು ಅಂತಾ ನನ್ನ ತಂಗಿ ಚಾಸಾ-4 ನನಗೆ ತಿಳಿಸಿದ್ದಳು.

ನಂತರ ನಾನು, ನನ್ನ ತಾಯಿ , ನನ್ನ ಅಜ್ಜ ಎಲ್ಲರೂ ಸೇರಿ ಪಂಚಾಯಿತಿ ಮಾಡಿ, ಹೊಂದಾಣಿಕೆ ಮಾಡಿಕೊಂಡು ಹೋಗಿ ಎಂದು ಬುದ್ದಿವಾದ ಹೇಳಿದ್ದೇವು. ಆದರೂ ಸಹಿತ ಸರಿ ಹೊಂದಲಿಲ್ಲ ಅಂತಾ ಮೃತ ನನ್ನ ಚಿಕ್ಕಮ್ಮ ಒಂದು ವಾರ ಮೊದಲು ನಮ್ಮ ಊರಿಗೆ ಬಂದು ವಿಷಯ ಹೇಳಿದ್ದಳು. ಆಗ ನಾವು ಬಂದು ಮಾತನಾಡುತ್ತೇವೆ ಅಂತಾ ಹೇಳಿ ಕಳುಹಿಸಿದೇವು. ಹೋಗಿ ಮೂರು ದಿನಗಳ ನಂತರ ಈ ರೀತಿ ಘಟನೆ ನಡೆದಿರುತ್ತದೆ. ನನ್ನ ಚಿಕ್ಕಮ್ಮಳ ಸಾವಿಗೆ ಆರೊಪಿತರು ಕಾರಣರಾಗಿರುತ್ತಾರೆ.

ನಿ.ಪಿ.1 ದೂರನ್ನು ನೋಡುತ್ತಿದ್ದು , ಅದರಲ್ಲಿರುವ ಬರವಣಿಗೆ ನನ್ನದಿದ್ದು , ಅದಕ್ಕೆ ನನ್ನ ರುಜು ಇದ್ದು , ರುಜುವನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಚಾಸಾ-1 ರವರು ಹೇಳಿದಂತೆ ನಾನು ಬರವಣಿಗೆ ಮಾಡಿರುತ್ತೇನೆ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ನನ್ನ ಚಿಕ್ಕಮನ ಮದುವೆಯಾಗುವ ಸಮಯದಲ್ಲಿ ನಾನು ಜನಿಸಿರಲಿಲ್ಲ. ನನ್ನ ಮೃತ ಚಿಕ್ಕಮ್ಮ ಮರಣ ಹೊಂದುವ ನಾಲ್ಕು ವರ್ಷ ಮೊದಲು ಕಿರುಕುಳ ನೀಡುತ್ತಿದ್ದರು ಎನ್ನುವುದು ನನಗೆ ಗೊತ್ತಾಯಿತು. ನನ್ನ ಚಿಕ್ಕಮ್ಮನ ಮದುವೆ ಈಗ ಸುಮಾರು 35 ವರ್ಷದ ಹಿಂದೆ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ನಾನು , ನನ್ನ ತಾತ, ನನ್ನ ತಾಯಿ 2014 ನೇ ಇಸ್ವಿಯಲ್ಲಿ ಆರೋಪಿತರ ಮನೆಗೆ ನ್ಯಾಯ ಪಂಚಯಿತಿ ಮಾಡಲು ಹೋಗಿದ್ದೇವು. ಸದರಿ ಕಿರುಕುಳಕ್ಕೆ ಸಂಬಂಧಪಟ್ಟಂತೆ ನನ್ನ ತಾಯಿಯಾಗಲಿ ನನ್ನ ಅಜ್ಜನಾಗಲಿ ಪೊಲೀಸರಿಗೆ ದೂರು ನೀಡಿಲ್ಲ.

ನಿಪಿ.1 ದೂರನ್ನು ಪೊಲೀಸ್ ಠಾಣೆಯಲ್ಲಿ ಬರೆಯಲಾಗಿದೆ ಎನ್ನುವುದು ನಿಜ. ದೂರು ಬರೆಯಲು ಠಾಣಾ ಪಿಎಸ್ಐ ರವರು ಹೇಳಿದರು ಎನ್ನುವುದು ನಿಜ.

ಆರೋಪಿತರು ಮೃತ ನನ್ನ ಚಿಕ್ಕಮ್ಮನಿಗೆ ಕಿರುಕುಳ ನೀಡುತ್ತಿದ್ದರು, ನೀನು ನೇಣು ಹಾಕಿಕೊಂಡು ಸಾಯಿ, ವಿಷ ಕುಡಿದು ಸಾಯಿ ಎಂದು ಹೇಳುತ್ತಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಅಜ್ಜ ಮತ್ತು ನನ್ನ ಅಕ್ಕನ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ–</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 11

CW- 04

ಪ್ರ. ಬೋ. ದಿನಾಂಕಃ 24-06-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಕವಿತಾ |
| ತಂದೆ/ಗಂಡನ ಹೆಸರು | : | ಓಬಳೇಶ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಕೋಡಿಹಳ್ಳಿ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ಅಜ್ಜ. ಚಾಸಾ-7 ನನ್ನ ಅಣ್ಣ . ಚಾಸಾ-8 ನನ್ನ ದೊಡ್ಡಮ್ಮ. ಚಾಸಾ-9 ನನ್ನ ಮಾವ. 1 ನೇ ಆರೋಪಿ ನನ್ನ ತಂದೆ. 2 ನೇ ಆರೋಪಿ ನನ್ನ ಚಿಕ್ಕಪ್ಪ , 3 ನೇ ಆರೋಪಿ ನನ್ನ ಚಿಕ್ಕಮ್ಮ , 4 ನೇ ಆರೋಪಿ ನನ್ನ ಅತ್ತೆ.

ನನ್ನ ತಂದೆ ತಾಯಿಗೆ ನಾನು ಒಬ್ಬಳೇ ಮಗಳು. ನನ್ನ ಮದುವೆಯಾಗುವ ಪೂರ್ವದಲ್ಲಿ ನಮ್ಮ ಮನೆಯಲ್ಲಿ ನಾನು , ನನ್ನ ತಂದ ತಾಯಿ ಮಾತ್ರ ವಾಸವಾದ್ದೇವು. ನಮ್ಮ ಮನೆಯ ಪಕ್ಕದಲ್ಲಿ ಆರೋಪಿ 2 ಮತ್ತು 3 ವಾಸವಾಗಿದ್ದರು. 4 ನೇ ಆರೋಪಿ ನಮ್ಮ ಮನೆಯಲ್ಲಿದ್ದರು. ನಾನು ನನ್ನ ತವರು ಮನೆಯಲ್ಲಿದ್ದಾಗ ನನ್ನ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ಹೊಡಿಯುವುದು , ಬಡಿಯುವುದು ಮತ್ತು ಮಾನಸಿಕವಾಗಿ ತೊಂದರೆ ಕೊಡುತ್ತಿದ್ದರು. ಆಗ ನಾವು ಇದಕ್ಕೆ ಸಂಬಂಧಪಟ್ಟಂತೆ ಹೊಂದಾಣಿಕೆ ಮಾಡಿಕೂಡು ಹೋಗಿ ಎಂದು ಹೇಳುತ್ತಿದೇವು. ಆದರೆ ನನ್ನ ಮಾತನ್ನು ಕೇಳಲಿಲ್ಲ. ಈ ವಿಚಾರವನ್ನು ನಾನು ಚಾಸಾ-1 ನನ್ನ ಅಜ್ಜ ಮತ್ತು ಮನೆಯವರಿಗೆ ತಿಳಿಸಿದೆ. ನಂತರ

ಅವರೂ ಸಹ ನ್ಯಾಯ ಪಂಚಾಯಿತಿ ಮಾಡಿ ಬುದ್ದಿವಾದ ಹೇಳಿದರೂ ಸಹ ಕೇಳಲಿಲ್ಲ.

ನನ್ನನ್ನು ಕೊಡಿಹಳ್ಳಿ ಗ್ರಾಮದ ವ್ಯಕ್ತಿಗೆ ಕೊಟ್ಟು ಮದುವೆ ಮಾಡಿಕೊಟ್ಟರು. ಆಸ್ತಿ ವಿಚಾರದ ಸಲುವಾಗಿ ನನ್ನ ಮತ್ತು ಆರೋಪಿತರ ಮಧ್ಯ ಗಲಾಟೆಯಾಗುತ್ತಿತ್ತು. ನನ್ನ ಮದುವೆಯಾದ ನಂತರ ನಿನಗೆ ಯಾವುದೇ ರೀತಿಯ ಆಸ್ತಿ ಕೊಡುವುದಿಲ್ಲ ಎಂದು ಹೇಳುತ್ತಿದ್ದರು. ನನ್ನನ್ನು ಕರೆಯುವುದು ಕಳುಹಿಸುವುದು ಮಾಡುತ್ತಿರಲಿಲ್ಲ. ನನ್ನ ಮದುವೆಯಾದ ನಂತರ ಸಹಿತ ನನ್ನ ತಾಯಿಯನ್ನು ಚನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ನೇಣು ಹಾಕಿಕೊಂಡು ಸಾಯಿ, ವಿಷ ಕುಡಿದು ಸಾಯಿ, ನೀನು ಇದು ಏನು ಮಾಡಬೇಕಾಗಿಲ್ಲ ಎಂದು ಸಹ ಹೇಳುತ್ತಿದ್ದರು. ಈ ವಿಷಯವನ್ನು ನನ್ನ ತಾಯಿ ನನ್ನ ಮನೆಗೆ ಬಂದಾಗ ತಿಳಿಸುತ್ತಿದ್ದರು. ಜಗಳವಾದಾಗ ನಾನು ತವರು ಮನೆಗೆ ಹೋಗುತ್ತಿದ್ದೆ ಆಗ ನಾನು ಇಬ್ಬರಿಗೂ ಬುದ್ದಿವಾದ ಹೇಳಿ ಬರುತ್ತಿದ್ದೆ.

ನನ್ನ ತಾಯಿ ನೇಣುಹಾಕಿಕೊಂಡು ಮೃತಪಟ್ಟಿರುತ್ತಾರೆ. ಆರೋಪಿತರು ಕೊಟ್ಟ ಕಿರುಕುಳದಿಂದ ನನ್ನ ತಾಯಿ ನೇಣುಹಾಕಿಕೊಂಡು ಮರಣ ಹೊಂದಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ–</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ನನ್ನ ಮದುವೆ ಮಾಡುವ ಪೂರ್ವದಲ್ಲಿ ನನ್ನ ಬಳಿ ಹಣ ಇಲ್ಲ , ನಾನು ಎಲ್ಲಿಂದ ಹಣ ತರಲಿ, ಅವಳು ಯಾರಜೊತೆಯಾದರೂ ಓಡಿ ಹೋಗಲು ಎಂದು ಮಾತನಾಡುತ್ತಿದ್ದರು ಎನ್ನುವುದು ನಿಜ.

<u>ಪಾಟೀಸವಾಲುಃ–</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ನನ್ನ ಮದುವೆಯನ್ನು ನನ್ನ ತಂದೆ ತಾಯಿ ಚೆನಾಗಿದ್ದು , ಅನೊನ್ಯತೆಯಿಂದ ಮದುವೆ ಮಾಡಿಕೊಟ್ಟಿರುತ್ತಾರೆ ಎನ್ನುವುದು ಸುಳ್ಳು. ನನ್ನ ಮದುವೆ ಖರ್ಚನ್ನು ನನ್ನ ತಂದೆ ತಾಯಿ ವಹಿಸಿಕೊಂಡಿರುವುದಿಲ್ಲ. ನನ್ನ ತಂದೆ ತಾಯಿ ನನ್ನ ಮದುವೆ ಮಾಡಿಕೊಟ್ಟರು. ಮದುವೆ ಸಮಯದಲ್ಲಿ ನನ್ನ ತಂದೆ ತಾಯಿ 3 ತೊಲ ಬಂಗಾರದ ಚೈನನ್ನು ನನಗೆ ಹಾಕಿದ್ದರು ಎನ್ನುವುದು ನಿಜ. ನನ್ನ ಗಂಡ ಸದರಿ ಚಿನ್ನದ ಚೈನನ್ನು ಅಡ ಇಟ್ಟು ಸಾಲ

ಪಡೆದಿರುತ್ತಾರೆ ಎನ್ನುವುದು ನಿಜ, ಆದರೆ ಕಷ್ಟಕ್ಕೆ ಸಾಲ ಪಡೆದಿರುತ್ತಾರೆ. ಕಷ್ಟ ಇರುವುದರಿಂದ ನನ್ನ ಗಂಡ ಮತ್ತು ನನ್ನ ಅಜ್ಜನಾದ ಚಾಸಾ–1 ನನ್ನ ತಂದೆಯ ಹೆಸರಿನಲ್ಲಿರುವ ಜಮೀನನ್ನು ನನ್ನ ಹೆಸರಿಗೆ ಬರೆಸಿಕೊಳ್ಳು ಎಂದು ಹೇಳುತ್ತಿದ್ದರು ಎನ್ನುವುದು ಸುಳ್ಳು. ಜಮೀನು ಬರೆದುಕೊಡದಿದ್ದರೂಸಹ ಆ ಜಮೀನ ಮೇಲೆ ಸಾಲ ಪಡೆದು , ಆ ಹಣವನ್ನಾದರೂ ನೀನು ಪಡೆದುಕೊಂಡು ಬಾ ಎಂದು ನನ್ನ ಗಂಡ ನನಗೆ ಹೇಳುತ್ತಿದ್ದ ಎನ್ನುವುದು ಸುಳ್ಳು.

ನಾನು, ನನ್ನ ಗಂಡ ಸೇರಿ ಮೃತ ನನ್ನ ತಾಯಿಗೆ ನನ್ನ ಹೆಸರಿಗೆ ಜಮೀನು ಬರೆದುಕೊಡಿ ಎಂದು ಕೇಳುತ್ತಿದ್ದೇವು ಎನ್ನುವುದು ಸುಳ್ಳು. ನನ್ನ ಮದುವೆಯಾದ ನಂತರ ನಾನು ಎರಡು ಸಲ ನನ್ನ ತಾಯಿ ಮನೆಗೆ ಹೋಗಿರುತ್ತೇನೆ ಕಾರಣ ಅವರು ಜಗಳ ಮಾಡಿಕೊಂಡಿದ್ದರಿಂದ ಹೋಗಿರುತ್ತೇನೆ.

ನನ್ನ ತಂದೆ ನನ್ನ ಹೆಸರಿಗೆ ಆಸ್ತಿ ಮಾಡಿ ಕೊಡದಿದ್ದಲ್ಲಿ ಸದರಿ ಆಸ್ತಿಯನ್ನು 1 ನೆ ಆರೋಪಿ 2 ಮತ್ತು 3 ನೇ ಆರೋಪಿತರಿಗೆ ಮಾಡಿಕೊಡುತ್ತಾನೆ ಎಂಬ ಭಯ ನನಗೆ , ನನ್ನ ಗಂಡನಿಗೆ ಮತ್ತು ನನ್ನ ಅಜ್ಜನಿಗೆ ಇತ್ತು ಎನ್ನುವುದು ಸುಳ್ಳು.

ಮದುವೆ ಸಮಯದಲ್ಲಿ ನನ್ನ ಗಂಡನಿಗೆ ನನ್ನ ತಂದೆ–ತಾಯಿ ಒಂದು ತೊಲೆ ಚಿನ್ನಂ ಚೈನು ನೀಡಿದ್ದರು , ಉಂಗುರ ಕೊಟ್ಟಿರಲಿಲ್ಲ. ನನ್ನ ತಂದೆ–ತಾಯಿಯರು ನನ್ನ ಗಂಡನಿಗೆ ಒಂದುವರೆ ತೊಲೆ ಚೈನು, ಅರ್ಧ ತೊಲೆ ಉಂಗುರ ಕೊಟ್ಟಿದ್ದರು ಎನ್ನುವುದು ಸುಳ್ಳು . ನನ್ನ ಗಂಡ ಚೈನು ಮತ್ತು ಉಂಗುರವನ್ನು ಲೋಕಿಕೆರೆ ಕೆನರಾ ಬ್ಯಾಂಕಿನಲ್ಲಿ ಅಡಮಾನವಿಟ್ಟಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿ ಚೈನನ್ನು ಮಾತ್ರ ಇಟ್ಟಿದ್ದರು ಎಂದು ಉತ್ತರಿಸಿರುತ್ತಾರೆ.

ಚಾಸಾ–1 ನನ್ನ ಅಜ್ಜನ ಮಾತಿನ ಮೇರೆಗೆ ಹಾಗೂ ಇಷ್ಟದ ಮೇರೆಗೆ ನನ್ನನ್ನು ಕೋಡಿಹಳ್ಳಿಯ ಓಬಳೇಶಪ್ಪನಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎನ್ನುವುದು ನಿಜ. ನನ್ನ ಅಜ್ಜ ಚಾಸಾ–1 ರವರ ಮಾತಿನ ಪ್ರಕಾರ ನಾನು ನನ್ನ ತಾಯಿಗೆ ಆಸ್ತಿಯನ್ನು ನನ್ನ ಹೆಸರಿಗೆ ಬರೆದುಕೊಡು ಎಂದು ಬಹಳ ಒತ್ತಾಯ ಮಾಡುತ್ತಿದ್ದೆ ಎನ್ನುವುದು ಸುಳ್ಳು.

ನನ್ನ ತಂಗಿಯ ಮಗಳು ಕವಿತಾ ನಮ್ಮ ಬಳಿ ಹೇಳಿದ್ದರಿಂದ ನಾನು ನನ್ನ ತಂದೆ ಇತರರು ಶಾಘಲೆ ಗ್ರಾಮಕ್ಕೆ ಬಂದು ದೇವೇಂದ್ರಪ್ಪ ಮತ್ತು ಅವರ ಕಡೆಯವರಿಗೆ ತಿಳುವಳಿಕೆ ಹೇಳಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ.

ನನ್ನ ಮೇಲೆ ನನ್ನ ತಂದೆ ಮತ್ತು ಚಿಕ್ಕಪ್ಪ-ಚಿಕ್ಕಮ್ಮರವರಿಗೆ ಪ್ರೀತಿ ಇದ್ದದ್ದರಿಂದ ನನ್ನ ಮದುವೆ ಸಮಯದಲ್ಲಿ ನನಗೆ ಮತ್ತು ನನ್ನ ಗಂಡನಿಗೆ ಒಡವೆ ಹಾಕಿ ಮದುವೆ ಮಾಡಿ ಕೊಟ್ಟಿರುತ್ತಾರೆ ಎನ್ನುವುದು ಸುಳು.

4 ನೇ ಆರೋಪಿ ಮದುವೆಯಾದ ನಂತರ ಗಂಡ ಮರಣ ಹೊಂದಿದ ಮೇಲೆ ಅವರು ನನ್ನ ತಂದೆ ಊರಲ್ಲಿ ಪ್ರತ್ಯೇಕ ಊರು ಮಾಡಿಕೊಂಡು ವಾಸ ಮಾಡಿಕೊಂಡಿರುತ್ತಾರೆ ಎನ್ನುವುದು ಸುಳ್ಳು.

ಆರೋಪಿತರು ನನ್ನ ತಾಯಿಗೆಯಾವುದೇ ರೀತಿಯ ಕಿರುಕುಳ ಕೊಟ್ಟಿಲ್ಲದಿದ್ದರೂ ಸಹ ನನ್ನ ಅಜ್ಜ ಮತ್ತು ಅಂಜನಪ್ಪ ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರು ನನ್ನ ತಾಯಿಗೆ ವಿಷ ಕುಡಿದು ಸಾಯಿ ಎಂದು ಹೇಳುತ್ತಿದ್ದರು ಎಂದು ನಾನು ಈ ಕೇಸಿಗೋಸ್ಕರ ಸೃಷ್ಟಿಸಿಕೊಂಡಿರುತ್ತೇನೆ ಎನ್ನುವುದು ಸುಳ್ಳು. ನಾನು ನನ್ನ ಗಂಡ, ಮತ್ತು ನನ್ನ ಅಜ್ಜನ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

SC.183/22

PW-1

ಆರೋಪಿ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ311ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು 17-01-2024 ರಂದು ಪುರಸ್ಕರಿಸಿದ್ದರಿಂದ ಸಾಕ್ಷಿಯ ಪಾಟೀಸವಾಲು ಮಾಡಲು ನ್ಯಾಯಾಲಯವು ಆರೋಪಿ ಪರ ವಕೀಲರಿಗೆ ಅನುಮತಿ ನೀಡಲಾಯಿತು.

ಇಂದು ದಿ.24-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾವಚ ಮಾಡಿಸಲಾಯಿತು.

<u>ಪಾಟೀಸವಾಲುಃ-</u> 1 ರಿಂದ 4 ನೇ ಆರೋಪಿತರಪರ ಶ್ರೀ ಆರ್ ಕೆ ವಕೀಲರಿಂದ.

ಆರೋಪಿತರು ನನ್ನ ಮಗಳಿಗೆ ವಿಷ ಕುಡಿದು ಸಾಯಿ ಅಂತಾ ಹೇಳುತ್ತಿದ್ದರು ಎನ್ನುವ ವಿಷಯವನ್ನು ನಿಪಿ.1 ದೂರಿನಲ್ಲಿ ನಾನು ಬರೆಸಿರುತ್ತೇನೆ. ನಿಪಿ.1 ದೂರನ್ನು ಓದಿ ಕೇಳಿ, ಸಹಿ ಮಾಡಿರುತ್ತೇನೆ. ದೂರನ್ನು ಬರೆದಂತಹ ಆಂಜನಪ್ಪ ಈತನು ನನ್ನ ಮೊಮ್ಮಗನಾಗಬೇಕು. ನಿಪಿ.2 ಮಹಜರನ್ನು ಪೊಲೀಸರು ಬರೆದುಕೊಂಡರು. ನಾವು ಹೇಳಿದೆವು, ಆ ಪ್ರಕಾರ ಆಂಜನಪ್ಪ ಮಹಜರ್ ಬರೆದರು. ನಿಪಿ.3 ನಕ್ಷೆಯನ್ನು ಯಾರು ತಯಾರು ಮಾಡಿದ್ದರು ಎಂದು ಗೊತ್ತಿಲ್ಲ. ನಿಪಿ.4 ರಿಂದ 6 ಪೋಟೋವನ್ನು ಯಾರು ತೆಗೆದಿರುತ್ತಾರೆ ಅಂತಾ ಅವರ ಹೆಸರು ಗೊತ್ತಿಲ್ಲ.

1 ನೇ ಆರೋಪಿಯ ಹೆಂಡತಿ ಮೃತೆ ನನ್ನ ಮಗಳು ಇರುತ್ತಾಳೆ. 1 ನೇ ಆರೋಪಿಯ ಮಗಳು ಅಂದರೆ ನನ್ನ ಮೊಮ್ಮಗಳು ಕವಿತಾಳನ್ನು ನಾನು ಹೇಳಿದ ಕಡೆ ಅವಳ ಮದುವೆ ಮಾಡಿಕೊಟ್ಟಿರುತ್ತಾರೆ ಎನ್ನುವುದು ನಿಜ. 1 ನೇ ಆರೋಪಿಗೆ ಎರಡು ಜನ ಹೆಣ್ಣುಮಕ್ಕಳು. ಮೊದಲನೆ ಮಗಳು ಕವಿತಾ , 2 ನೇ ಮಗಳು ಅಂಗವಿಕಲಳಿದ್ದು , ಅವಳು ಸುಮಾರು ಏಳೆಂಟು ವರ್ಷದವಳಿದ್ದಾಗ ಮರಣಹೊಂದಿರುತ್ತಾಳೆ.

ನಾವು ಹೇಳಿದ ಕಡೆ ಕವಿತಾಳನ್ನು 1 ನೇ ಆರೋಪಿ ಮದುವೆ ಮಾಡಿಕೊಟ್ಟಿದ್ದರಿಂದ 1 ನೇ ಆರೋಪಿಯ ಹೆಸರಿನಲ್ಲಿದ್ದ ಜಮೀನನ್ನು ನನ್ನಮೊಮ್ಮಗಳಾದ ಕವಿತಾ ಇವಳ ಹೆಸರಲ್ಲಿ ಮಾಡಿಕೊಡಬೇಕು ಅಂತಾ ನಾವು ಕೇಳುತ್ತಿದ್ದೇವೆ ಎನ್ನುವುದು ನಿಜ. 1 ನೇ ಆರೋಪಿ ಪಂಚಾಯಿತಿಯಲ್ಲಿ ಗ್ರಾಮ ಸೇವಕನಾಗಿ ಕೆಲಸ ಮಾಡುತ್ತಿದ್ದಾನೆ ಎನ್ನುವುದು ನಿಜ. 1 ನೇ

ಆರೋಪಿ ಗ್ರಾಮ ಸೇವಕನಾಗಿರುವುದರಿಂದ, ಪ್ರತಿ ತಿಂಗಳು ವೇತನ ಪಡೆಯುತ್ತಿರುವುದರಿಂದ ಜಮೀನನ್ನು ನನ್ನ ಮೊಮ್ಮಗಳಾದ ಕವಿತಾಳ ಹೆಸರಿಗೆ ಮಾಡುವಂತೆ ನಾನು ಹೇಳುತ್ತಿದ್ದೆ ಎನ್ನುವುದು ನಿ ಜ. ಅದೇ ಪ್ರಕಾರ ಮೃತ ನನ್ನ ಮಗಳಿಗೆ ಸಹ ಈ ವಿಷಯ ನಾನು ಹೇಳುತ್ತಿದ್ದೆ. ಇದಕ್ಕೆ ಸಂಬಂಧಪಟ್ಟಂತೆ ಮೃತ ನನ್ನ ಮಗಳು ಮತ್ತು 1 ನೇ ಆರೋಪಿ ಏನೂ ಹೇಳಲಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ಮೊಮ್ಮಗಳು ಕವಿತಾ ಮತ್ತು ಅವಳ ಗಂಡನ ಮಧ್ಯ ಜಗಳವಾಗುತ್ತಿತ್ತು. ನಾನು ಮೃತ ನನ್ನ ಮಗಳಿಗೆ ಜಮೀನನ್ನು ಕವಿತಾಗೆ ಬರೆಸಿಕೊಡು ಎಂದು ಒತ್ತಾಯ ಮಾಡುತ್ತಿದ್ದೆ ಮತ್ತು ನನ್ನ ಮೊಮ್ಮಗಳಿಗೆ ಜಮೀನನ್ನು ತೆಗೆದುಕೋ ಎಂದು ಹೇಳುತ್ತಿದ್ದೆ ಎನ್ನುವುದು ನಿಜ.

ಮೃತ ನನ್ನ ಮಗಳ ಎರಡು ಮಕ್ಕಳಿಗೆ ಹೆರಿಗೆ ಆಗುವಾಗ ಶಸ್ತ್ರ ಚಿಕಿತ್ಸೆ ಮೂಲಕ ಹೆರಿಗೆ ಆಗಿರುತ್ತದೆ. ಮಕ್ಕಳಾಗದಿರುವ ಬಗ್ಗೆ 3 ನೇ ಸಲ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾಳೆ ಎನ್ನುವುದು ಸುಳ್ಳು. ಮೃತ ನನ್ನ ಮಗಳು ಮರಣ ಹೊಂದುವ ಮೊದಲು ಅವಳಿಗೆ ಗರ್ಭಕೋಶದ ಶಸ್ತ್ರ ಚಿಕಿತ್ಸೆ ಆಗಿತ್ತು ಎನ್ನುವುದು ನಿಜ. ಚಿಕಿತ್ಸೆಯಾದ ನಂತರ ಅವಳು ಚೆನ್ನಾಗಿದ್ದಳು. ಸದರಿ ಶಸ್ತ್ರ ಚಿಕಿತ್ಸೆಯಾಗಲು ಕಾರಣ ಮಾಡಿಸದಿದ್ದಲ್ಲಿ ಅವಳಿಗೆ ಕ್ಯಾನ್ಸರ್ ಕಾಯಿಲೆಯಾಗುವ ಸಾಧತೆ ಇತ್ತು ಎಂದು ವೈದ್ಯರು ನನಗೆ ತಿಳಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟಂತೆ ನಾನು ಆಸ್ಪತ್ರೆಗೆ ಹೋಗಿಲ್ಲ. ಶಸ್ತ್ರಚಿಕಿತ್ಸೆಯಾಗಿದ್ದರಿಂದ ಮೃತ ನನ್ನ ಮಗಳ ದೇಹ ಕ್ಷೀಣಿಸತೋಡಗಿತ್ತು ಎನ್ನುವುದು ಸರಿಯಲ್ಲ.

ಮೃತ ನನ್ನ ಮಗಳಿಗೆ ಆರೋಗ್ಯದ ಸಮಸ್ಯ ಒಂದು ಕಡೆ , ಹಾಗೂ ನನ್ನ ಮೊಮ್ಮಗಳಿಗೆ ಜಮೀನು ಮಾಡಿಕೊಡುವ ಇನ್ನೊಂದು ಸಮಸ್ಯ , ಈ ಎರಡೂ ಸಮಸ್ಯಗನ್ನು ನನ್ನ ಮಗಳಿಗೆ ತಡೆದುಕೊಳ್ಳಲು ಆಗಲಿಲ್ಲ ಎನ್ನುವುದು ಸರಿಯಲ್ಲ. ಈ ಸಮಸ್ಯಯಿಂದ ಅವಳು ಆತ್ಮಹತ್ಯ ಮಾಡಿಕೊಂಡಿದ್ದರು ಸಹ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಆರೋಪಿತರು ನನ್ನ ಮಗಳಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳಕೊಟ್ಟಿದ್ದು , ಆ ಕಾಣದಿಂದ ನಾನು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. 2 ನೇ ಆರೋಪಿ 1 ನೇ ಆರೋಪಿಯ ಸಹೋದರ , 3 ನೇ ಆರೋಪಿ 2 ನೇ ಆರೋಪಿಯ ಹೆಂಡತಿ , 4 ನೇ ಆರೋಪಿ 1 ನೇ

ಆರೋಪಿಯ ತಂಗಿ ಇರುತ್ತಾಳೆ.

2 ಮತ್ತು 3 ನೇ ಆರೋಪಿತರು ಅದೇ ಮನೆಯಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ. 4 ನೇ ಆರೋಪಿಯ ಗಂಡ ಮರಣ ಹೊಂದಿದ್ದರಿಂದ ಸದರಿಯವರು ಸಹ ಸದರಿ ಓಣಿಯಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎನ್ನುವುದು ನಿಜ. ನನ್ನ ಮೊಮ್ಮಗಳಾದ ಕವಿತಾಳಿಗೆ 1 ನೇ ಆರೋಪಿ ಆಸ್ತಿಯನ್ನು ಬರೆದುಕೊಡದಿದ್ದಲ್ಲಿ 2 ಮತ್ತು 3 ನೇ ಆರೋಪಿತರಿಗೆ ಆಸ್ತಿಯನ್ನು ಬರೆಯುತ್ತಾನೆ ಎನ್ನುವ ಕಾರಣಕ್ಕೆ 1 ನೇ ಆರೋಪಿಗೆ ನಾವು ಒತ್ತಾಯ ಮಾಡುತ್ತಿದ್ದೇವು ಎನ್ನುವುದು ಸರಿಯಲ್ಲ. 1 ನೇ ಆರೋಪಿಗೆ ಜಗಳವಾಡಬೇಡಿ , ಚೆನ್ನಾಗಿರಿ ಎಂದು ಬುದ್ದಿವಾದ ಹೇಳಿರುತ್ತೇನೆ, ಆದರೆ ಯಾವ ಹೇಳಿರುತ್ತೇನೆ ಎಂದು ದಿನಾಂಕ ನೆನಪಿರುವುದಿಲ್ಲ. ಸಣ್ಣಪುಟ್ಟ ವಿಚಾರಕ್ಕೆ ಗಲಾಟೆ ಮಾಡುತ್ತಿದ್ದರು ಅಂತಾ ನನ್ನ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ನುಡಿದಿದ್ದು , ಸಣ್ಣ ಪುಟ್ಟ ವಿಚಾರ ಎಂದರೆ ಸಾಕಷ್ಟು ವಿಚಾರ ಮನೆತನದವು ಇರುತ್ತವೆ , ಅವುಗಳನ್ನೆಲ್ಲ ಹೇಳಲು ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ನನ್ನ ಮಗಳು ಮರಣ ಹೊಂದಿದ ನಂತರ 1 ನನೇ ಆರೋಪಿಗೆ ಈಗಲಾದರೂ ಆಸ್ತಿಯನ್ನು ನನ್ನ ಮೊಮ್ಮಗಳಾದ ಕವಿತಾಳ ಹೆಸರಿಗೆ ಮಾಡಿಕೊಡು ಎಂದು ನಾನು ಕೇಳಿರುತ್ತೇನೆ ಎನ್ನುವುದು ಸುಳ್ಳು . 1 ನೇ ಆರೋಪಿ ಮತ್ತು ಮೃತ ನನ್ನ ಮಗಳು ಇಬ್ಬರೂ ಸಹಿತ ಚನ್ನಾಗಿದ್ದು , ಯಾವುದೇ ರೀತಿ ತೊಂದರೆ ಕೊಡುತ್ತಿಲ್ಲದಿದ್ದರೂ ಸಹ ಕೊಡುತ್ತಿದ್ದರು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯಾವತ್ತು ಆರೋಪಿತರು ನನ್ನ ಮಗಳಿಗೆ ವಿಷ ಕುಡಿದು ಸಾಯಿ ಅಂತಾ ಹೇಳಿಲ್ಲದಿದ್ದರೂ ಸಹ ಈ ವಿಷಯವನ್ನು ನಾನು ಈ ಕೇಸಿಗಾಗಿ ಸೃಷ್ಟಿಸಿಕೊಂಡಿರುತ್ತೇನೆ ಎನ್ನುವುದು ಸುಳ್ಳು.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.